ಸುವರ್ಣ ಮಹೋತ್ಸವ

(22 ನೆ ಪುಟದಿಂದ)

"ವಿಕಿರಣದ ರೇಖಾ ವರ್ಣಪಟಲವನ್ನು ಮೊದಲ ಬಾರಿಗೆ ಫೆಬ್ರುವರಿ ೨೮,೧೯೨೮ ರಲ್ಲಿ ನೋಡಲಾಯಿತು. ಮರುದಿನ ಈ ವೀಕ್ಷಣೆಗೆ ಪ್ರಚಾರ ನೀಡಲಾಯಿತು."

ಮುದ್ರಿಸಿ ಪ್ರಚುರಪಡಿಸಿದ ದಿನಾಂಕ ಮಾರ್ಚ್ ೧೬,೧೯೨೮. ಪ್ರೊಫೆಸರ್ ರಾಮನ್ ಅವರ ಈ ಸಂಶೋಧನೆಗೆ ೧೯೩೦ ರಲ್ಲಿ ನೊಬೆಲ್ ಪ್ರಶಸ್ತಿ ನೀಡಲಾಯಿತು.

ಚಂದ್ರಶೇಖರ ವೆಂಕಟರಾಮನ್ ದಕ್ಷಿಣ ಭಾರತದ ತಿರುಚಿನಾಪಳ್ಳಿಯಲ್ಲಿ ನವೆಂಬರ್ ೭,೧೮೮೮ ರಲ್ಲಿ ಹುಟ್ಟಿದರು. ರಾಮನ್‌ರ ಮೊದಲ ಶಿಕ್ಷಣ ನಡೆದದ್ದು ವಿಶಾಖಪಟ್ಟಣದಲ್ಲಿ. ಮ್ಯಾಟ್ರಿಕ್ ನಂತರ ಅವರು ಪ್ರಥಮ ಆರ್ಟ್ಸ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ೧೯೦೨ರಲ್ಲಿ ಈ ಪರೀಕ್ಷೆಯಲ್ಲಿ ಪ್ರಥಮದರ್ಜೆ ಅಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಉನ್ನತ ರ್‍ಯಾಂಕ್‌ಗಳಿಸಿದ ರಾಮನ್ ವಿಶ್ವವಿದ್ಯಾನಿಲಯದ ಪದವಿ ಕೋರ್ಸಿಗೆ ಸೇರಲು ಅರ್ಹತೆ ಪಡೆದರು. ಜನವರಿ ೧೯೦೩ ರಲ್ಲಿ ಮದರಾಸಿಗೆ ಬಂದ ರಾಮನ್ ಅಲ್ಲಿನ ಪ್ರೆಸಿಡೆನ್ಸಿ ಕಾಲೇಜಿಗೆ ದಾಖಲಾದರು. ೧೯೦೪ ನೆ ಇಸವಿಯಲ್ಲಿ ರಾಮನ್ ಬಿ.ಎ. ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನಲ್ಲದೆ ಭೌತಶಾಸ್ತ್ರದಲ್ಲಿ ಸುವರ್ಣ ಪದಕವನ್ನೂ ಗೆದ್ದರು ರಾಮನ್. ಅವರು ೧೯೦೭ ರಲ್ಲಿ ಎಂ. ಎ. ಪದವಿಯಲ್ಲಿ ಉತ್ತೀರ್ಣರಾದರು. ಮತ್ತೆ ಪ್ರಥಮ ಶ್ರೇಣಿ ಮತ್ತು ದಾಖಲೆ ಅಂಕ ಪಡೆದರು.

ಯುವಕ ರಾಮನ್ ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪದವೀ ಪೂರ್ವ ವ್ಯಾಸಂಗ ಮಾಡುತ್ತಿದ್ದಾಗಲೇ ವೈಜ್ಞಾನಿಕ ಸಂಶೋಧನೆಯತ್ತ ಅವರ ಒಲವು ಗಮನಾರ್ಹವಾಗಿತ್ತು. ಅವರು ಆಗಲೇ ಶಬ್ದಶಾಸ್ತ್ರ ಮತ್ತು ಬೆಳಕಿನ ಶಾಸ್ತ್ರಗಳ ಕ್ಷೇತ್ರಗಳಲ್ಲಿ ಮೂಲ ಸಂಶೋಧನೆಗಳನ್ನು ನಡೆಸಿದ್ದರು. ರಾಮನ್ ಅವರ ಮೊದಲ ಸಂಶೋಧನಾ ಪತ್ರ "ಫಿಲಸಾಫಿಕಲ್ ಮ್ಯಾಗಜೈನ್"ನಲ್ಲಿ ೧೯೦೬ ರಲ್ಲಿ ಪ್ರಕಟವಾಯಿತು. ಇದನ್ನನುಸರಿಸಿ ಮತ್ತೊಂದು ಟಿಪ್ಪಣಿ ೧೯೦೭ ರ "ನೇಚರ್"ನಲ್ಲಿ ಪ್ರಕಟವಾಯಿತು.

೧೯೦೭ ರಲ್ಲಿ ಕಲ್ಕತ್ತಾದಲ್ಲಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಗೆ ರಾಮನ್ ಕುಳಿತರು. ಉದ್ದೇಶ ಸರಕಾರದ ಸೇವೆಗೆ ಆಯ್ಕೆ ಹೊಂದಬೇಕೆಂಬುದು. ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಗಳಿಸಿದ ರಾಮನ್ ೧೯೦೭ ರ ಜೂನ್ ತಿಂಗಳಲ್ಲಿ ಭಾರತೀಯ ಹಣಕಾಸು ಇಲಾಖೆಯಲ್ಲಿ ಅಸಿಸ್ಟೆಂಟ್ ಅಕೌಂಟೆಂಟ್ ಜನರಲ್ ಆಗಿ ಸೇರಿದರು. ಅವರ ಮುಂದಿನ ಹತ್ತು ವರ್ಷಗಳು ಹಣಕಾಸು ಇಲಾಖೆಯಲ್ಲಿ ಅಧಿಕಾರಿಯಾಗಿ ಕಳೆಯಿತು.

ಹೆಚ್ಚಿನ ವೇಳೆ ಕಚೇರಿಯ ದುಡಿಮೆಗೇ ವಿನಿಯೋಗವಾಗುತ್ತಿದ್ದರೂ ರಾಮನ್ ಅವರಲ್ಲಿ ಅಡಗಿ ಕುಳಿತಿದ್ದ ವಿಜ್ಞಾನಿಯನ್ನು ಅದುಮಲು ಅಥವಾ ಬದಿಗೆ ಸರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಅವರು ವಿಜ್ಞಾನದಲ್ಲಿ ತಮ್ಮ ಆಸಕ್ತಿಯನ್ನು ಉಳಿಸಿಕೊಂಡು ಪ್ರಯೋಗಗಳನ್ನು ನಡೆಸಲು ಅವಕಾಶಗಳನ್ನು ಅರಸಿ ಕಂಡುಕೊಂಡರು. ಅಷ್ಟೇ ಅಲ್ಲದೆ ಕೆಲವೊಮ್ಮೆ ಅವರು ತೀರಾ ಪ್ರತಿಕೂಲ ಮತ್ತು ತಾವೇ ಉಪಕರಣ ನಿರ್ಮಿಸಿಕೊಳ್ಳಬೇಕಾದ ಪರಿಸ್ಥಿತಿಗಳಲ್ಲಿ ಪ್ರಯೋಗಗಳನ್ನು ನಡೆಸುತ್ತಿದ್ದರು. ಅನೇಕ ವರ್ಷಗಳವರೆಗೆ ರಾಮನ್ ಅವರ ಕಾರ್ಯಾಗಾರವಾಯಿತು "ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಕಲ್ಟಿವೇಷನ್ ಆಫ್ ಸೈನ್ಸ್". ರಾಮನ್ ಅಲ್ಲಿ ಸಂಶೋಧನೆ ನಡೆಸುತ್ತಿದ್ದಾಗಲೇ "ರಾಮನ್ ಪರಿಣಾಮ" (ರಾಮನ್ ಎಫೆಕ್ಟ್) ಕಂಡುಹಿಡಿದದ್ದು ಮತ್ತು ಈ ಸಂಶೋಧನೆಯಲ್ಲಿ ಪರ್ಯವಸಾನ ಹೊಂದಿದ ಅನೇಕ ಪ್ರಯೋಗಗಳನ್ನು ನಡೆಸಿದ್ದು.

೧೯೩೩ರಲ್ಲಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಪ್ರಥಮ ಭಾರತೀಯ ಡೈರೆಕ್ಟರಾಗುವಂತೆ ರಾಮನ್‌ಗೆ ಆಹ್ವಾನ ನೀಡಲಾಯಿತು. ರಾಮನ್ ಅಲ್ಲಿ ೧೯೪೮ ರವರೆಗೆ ಸೇವೆ ಸಲ್ಲಿಸಿದರು.

ರಾಮನ್ ಬೆಂಗಳೂರಿಗೆ ಸ್ಥಳಾಂತರಿಸಿದ ಮೇಲೆ ರಾಷ್ಟ್ರಮಟ್ಟದಲ್ಲಿ ವೈಜ್ಞಾನಿಕ ಕ್ಷೇತ್ರದಲ್ಲಿ ಉಂಟಾದ ಒಂದು ಗಮನಾರ್ಹ ಬೆಳವಣಿಗೆ ಎಂದರೆ "ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್" ಸ್ಥಾಪನೆ. ಪ್ರಾಧ್ಯಾಪಕ ರಾಮನ್ ೧೯೩೪ ರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದರು. ಭಾರತಾದ್ಯಂತ ಲಭ್ಯವಿದ್ದ ಎಲ್ಲ ಯುವ ವಿಜ್ಞಾನಿಗಳನ್ನು ಈ ಸಂಸ್ಥೆಯ ಸದಸ್ಯ (ಫೆಲೋ)ರನ್ನಾಗಿ ಆರಿಸಿದರು. ರಾಮನ್ ಈ ಸಂಸ್ಥೆಯ ಸ್ಥಾಪಕ-ಅಧ್ಯಕ್ಷರಾಗಿದ್ದು ತಮ್ಮ ಉಸಿರಿರುವವರೆಗೂ ಆ ಸ್ಥಾನ ಅಲಂಕರಿಸಿದ್ದರು. ಭಾರತೀಯ ವೈಜ್ಞಾನಿಕ ಅಕಾಡೆಮಿ ತನ್ನ ವಿಚಾರಧಾರೆಯನ್ನು ಎರಡು ವಿಭಾಗಗಳಲ್ಲಿ ಪ್ರಕಟಿಸ ಲಾರಂಭಿಸಿತು. ಒಂದು ಭೌತಿಕ ವಿಜ್ಞಾನಗಳಿಗೆ ಮೀಸಲಾದ ವಿಭಾಗ, ಮತ್ತೊಂದು ಜೀವವಿಜ್ಞಾನ ಕ್ಷೇತ್ರಕ್ಕೆ ಮುಡಿಪು. ಈ ಕ್ಷೇತ್ರಗಳಲ್ಲಿ ಅಕಾಡೆಮಿ ಭಾರತದಲ್ಲಿ ನಡೆದ ಅತಿ ಗಮನಾರ್ಹ ವೈಜ್ಞಾನಿಕ ಸಂಶೋಧನೆಗಳನ್ನು ಪ್ರಕಟಿಸಿತು.

ಪ್ರಾಧ್ಯಾಪಕ ರಾಮನ್ ತಾವೇ ಸಂಗ್ರಹಿಸಿದ ಹಣದಿಂದ ೧೯೪೮ ರಲ್ಲಿ ರಾಮನ್ ಸಂಶೋಧನಾ ಸಂಸ್ಥೆ ಸ್ಥಾಪಿಸಿದರು. ಅನಂತರ ಅವರು ತಮ್ಮ ಇಡೀ ವೈಯಕ್ತಿಕ ಆಸ್ತಿಯನ್ನು ಸಂಸ್ಥೆಗೆ ಕೊಡುಗೆಯಾಗಿ ನೀಡಿದರು. ರಾಮನ್ ಈ ಸಂಸ್ಥೆಯ ಚಟುವಟಿಕೆಗಳನ್ನು ೨೦ ವರ್ಷಕಾಲ ನಿರ್ದೇಶಿಸಿದರು.

ರಾಮನ್ ಇನ್‌ಸ್ಟಿಟ್ಯೂಟ್‌ನ ಅಸ್ತಿತ್ವದ ಮೊದಲ ದಶಕ ಅಪಾರ ಚಟುವಟಿಕೆಯ ಕಾಲ. ಹಲವಾರು ಮೂಲಭೂತ ಮತ್ತು ಪ್ರಖರವಾದ ಸಂಶೋಧನೆಗಳು ನಡೆದದ್ದು ಈ ದಶಕದಲ್ಲಿ. ಗುಣಮಟ್ಟ ಮತ್ತು ಸಂಖ್ಯೆ ಎರಡೂ ದೃಷ್ಟಿಗಳಿಂದ ಈ ದಶಕದ ಸಂಶೋಧನೆಗಳನ್ನು ಸರಿಗಟ್ಟಬಲ್ಲ ಸಂಶೋಧನೆಗಳು ಈ ದೇಶದಲ್ಲಿ ನಡೆದೇ ಇಲ್ಲವೆನ್ನಬಹುದು. ಪ್ರಾಧ್ಯಾಪಕ ರಾಮನ್ ಅವರೊಡನೆ ಈ ಅವಧಿಯಲ್ಲಿ ಸಹಕರಿಸಿ ದುಡಿದ ವಿಜ್ಞಾನಿಗಳು ಅತ್ಯುನ್ನತ ಶ್ರೇಣಿಗೆ ಸೇರಿದವರಾಗಿದ್ದು ನಾವು ಪಡೆದ ವಿಜ್ಞಾನಿಗಳಲ್ಲಿ ಅತಿ ಶ್ರೇಷ್ಠರಾಗಿದ್ದವರು. ಹಣ ಒದಗಿಸುವ ಸಂಸ್ಥೆಗಳೊಡನೆ ಒಪ್ಪಂದ ಮಾಡಿಕೊಳ್ಳುವಂತಹ ಪ್ರಸಂಗಗಳನ್ನು ನಿವಾರಿಸಲು ರಾಮನ್ ತಮ್ಮ ಸಂಸ್ಥೆಯನ್ನು ಖಾಸಗಿ ಪ್ರಯೋಗಾಲಯವಾಗಿ ಬದಲಾಯಿಸಿದರು. ಪ್ರಯೋಗಾಲಯವನ್ನು ತಮ್ಮ ವ್ಯಕ್ತಿಘನತೆ ಮತ್ತು ಕುಗ್ಗದ ವೈಯಕ್ತಿಕ ಚಟುವಟಿಕೆಯಿಂದ ಜೀವಂತವಾಗಿಟ್ಟರು. ರಾಮನ್‌ರ ಪ್ರಯೋಗಶಾಲೆ ಶಿಕ್ಷಣ ಮತ್ತು ಸಂಶೋಧನೆಯ ಸ್ವಾಯತ್ತತೆಯ ಒಂದು ದ್ವೀಪವಾಗಿತ್ತು. ಅಲ್ಲಿ ನಡೆಯುತ್ತಿದ್ದ ಸಂಶೋಧನೆಗಳಿಗೆ ಪ್ರೇರಣೆ ಕೇವಲ ವೈಜ್ಞಾನಿಕ ಕುತೂಹಲ.

೧೯೭೦ರ ನವೆಂಬರ್‌ನಲ್ಲಿ ತಾವು ಸಾಯುವ ಕೆಲವೇ ದಿನಗಳ ಮುನ್ನ ಪ್ರೊಫೆಸರ್ ರಾಮನ್ ಹೇಳಿದರು: "ನನ್ನ ಅನಂತರ ಇನ್‌ಸ್ಟಿಟ್ಯೂಟ್‌ನ ಏಕವ್ಯಕ್ತಿಕೇಂದ್ರ ಪ್ರಾಧಾನ್ಯತೆ ಬದಲಾಗುವುದು ಅನಿವಾರ್ಯ. ಅದು ವಿಜ್ಞಾನದ ಹಲವಾರು ಶಾಖೆಗಳನ್ನು ತನ್ನೊಳಗೆ ಅಪ್ಪಿಕೊಂಡು ದೊಡ್ಡ ಜ್ಞಾನಕೇಂದ್ರವಾಗಿ ವಿಕಸಿಸಬೇಕು. ವಿಶ್ವದ ವಿವಿಧ ಭಾಗಗಳಿಂದ ಮತ್ತು ಭಾರತದ ಬೇರೆ ಬೇರೆ ಪ್ರದೇಶಗಳಿಂದ ವಿಜ್ಞಾನಿಗಳನ್ನು ಈ ಸಂಸ್ಥೆ ಆಕರ್ಷಿಸಬೇಕು. ಅದಕ್ಕೆ ಈಗಾಗಲೇ ಅಡಿಪಾಯ ಬಿದ್ದಿದೆ. ಉಚ್ಚ ಕಲಿಕೆಯ ಕೇಂದ್ರವಾಗಿ ಬೆಳೆಯಲು ಸೂಕ್ತವಾದ ಕೇಂದ್ರಬಿಂದುವಾಗಿದೆ ಈ ಇನ್‌ಸ್ಟಿಟ್ಯೂಟ್ ಎನಿಸುತ್ತದೆ ನನಗೆ".

ರಾಮನ್ ತಮ್ಮ ಹಿಂದೆ ಬಿಟ್ಟುಹೋದ ಆಸ್ತಿಯಲ್ಲಿ ಅವರು ತಮ್ಮ ಜೀವಮಾನದುದ್ದಕ್ಕೂ ಬಳಸಿದ ಉಪಕರಣಗಳು, ಭಾರಿ ಖಾಸಗಿ ಪುಸ್ತಕ ಭಂಡಾರ, ಅಚ್ಚರಿಗೊಳಿಸುವಂತಹ ಖನಿಜ ಮಾದರಿಗಳ ಸಂಗ್ರಹ ಮತ್ತು ಇವೆಲ್ಲಕ್ಕಿಂತ ಮಿಗಿಲಾಗಿ ಅಮೂಲ್ಯವಾದ ಅವರ ಹೆಸರಿನೊಂದಿಗೆ ಸಂಲಗ್ನವಾಗಿದ್ದ ಹಿರಿಮೆ.

ಇನ್‌ಸ್ಟಿಟ್ಯೂಟಿನ ಚಟುವಟಿಕೆಗಳನ್ನು ೧೯೭೨ ರಲ್ಲಿ ಪುನಶ್ಚೇತನಗೊಳಿಸಲಾಯಿತು. ಇಂದು ರಾಮನ್ ಇನ್‌ಸ್ಟಿಟ್ಯೂಟಿನಲ್ಲಿ ನಡೆಯುತ್ತಿರುವ ಪ್ರಮುಖ ಸಂಶೋಧನೆ ವಿಷಯಗಳು ದ್ರವಹರಳುಗಳು (ಲಿಕ್ವಿಡ್ ಕ್ರಿಸ್ಟಲ್ಸ್), ಖಭೌತಶಾಸ್ತ್ರ, ರೇಡಿಯೋ ಅಸ್ಟ್ರಾನಮಿ, ಮತ್ತು ಅದಕ್ಕೆ ಅನುವಾಗುವ ಎಲೆಕ್ಟ್ರಾನಿಕ್ಸ್ ಮುಂತಾದವುಗಳಾಗಿವೆ.

ವಿಜ್ಞಾನಿ ರಾಮನ್‌ರನ್ನು ತಿಳಿಯಿರಿ

ಮಡಿಯುವುದಕ್ಕೆ ಕೇವಲ ಒಂದು ತಿಂಗಳ ಹಿಂದೆ ತಾನೇ ಡಾ|| ಸಿ. ವಿ. ರಾಮನ್, "ವಿಜ್ಞಾನ ನನ್ನ ಧರ್ಮ. ಅದನ್ನು ನನ್ನ ಕೊನೆಯುಸಿರು ಇರುವವರೆಗೂ ಪಾಲಿಸುತ್ತೇನೆ" ಎಂದಿದ್ದರು.

* * * *

ಭೌತಶಾಸ್ತ್ರಕ್ಕೆ ನೊಬೆಲ್ ಪಾರಿತೋಷಕ ಪಡೆದ ಏಕೈಕ ಭಾರತೀಯ ವಿಜ್ಞಾನಿ ಡಾ|| ರಾಮನ್.

* * * *

ವಿಜ್ಞಾನದಲ್ಲಿ ಭಾರತೀಯ ಪುನರ್ಜಸ್ಮರ ನಿರ್ಮಾತೃ ಮತ್ತು ನಾಯಕ—ಡಾ|| ರಾಮನ್.

* * * *

ಸ್ವಾತಂತ್ರ್ಯಾನಂತರ ಭಾರತದಲ್ಲಿ ವಿಜ್ಞಾನಾಭಿವೃದ್ಧಿ ರೀತಿ ಕುರಿತು ಡಾ|| ರಾಮನ್ ಟೀಕಿಸಿದ್ದರು. ಸ್ವತಂತ್ರ ಭಾರತ ಸ್ಮರಿಸಬಹುದಾದಂಥ ಒಬ್ಬನೇ ಗಮನಾರ್ಹ ವಿಜ್ಞಾನಿಯನ್ನೂ ನಾವು ಸೃಷ್ಟಿಸಿಲ್ಲ ಎಂದೇ ಅವರು ಮರುಗುತ್ತಿದ್ದರು. ರಾಷ್ಟ್ರೀಯ ಪ್ರಯೋಗಮಂದಿರಗಳಿಗಾಗಿ ಅಗಾಧ ಹಣವ್ಯಯ ಮಾಡುತ್ತಿರುವುದನ್ನು ಟೀಕಿಸಿ, ಈ ಪ್ರಯೋಗಮಂದಿರಗಳನ್ನು "ಕಾದುರೆಲಾಯ" ಗಳೆಂದು ವ್ಯಂಗ್ಯ ಮಾಡಿದ್ದರು.

* * * *

ನೊಬೆಲ್ ಪಾರಿತೋಷಕ ಪಡೆದ ತಮ್ಮ ಪ್ರಯೋಗ ಸಲಕರಣೆಗಳ ವೆಚ್ಚ ರೂ. ೩೦೦ ಕ್ಕಿಂತ ಹೆಚ್ಚಿಲ್ಲ. ಆ ಸಲಕರಣೆಗಳೆಲ್ಲವನ್ನೂ ನನ್ನ ಮೇಜಿನ ಖಾನೆಯಲ್ಲಿಯೇ ಇಟ್ಟಿರುವುದಾಗಿ ಹೇಳಿದ್ದರು.

* * * *

ರಾಮನ್ ಪರಿಣಾಮ ಪ್ರಕಟಿಸಲ್ಪಟ್ಟ ಒಂದು ದಶಕದಲ್ಲಿ (೧೯೨೮-೩೮) ಅದರ ಮೇಲೆ ಬರೆಯಲ್ಪಟ್ಟ ಪ್ರಬಂಧಗಳ ಸಂಖ್ಯೆ ೧, ೨೦೦.

ಡಾ|| ರಾಮನ್ ಭಾರಿ ಸಂಗೀತಪ್ರಿಯ. ಕರ್ನಾಟಕ ಸಂಗೀತದಲ್ಲಿ ಭಾರಿ ಆಸಕ್ತಿ. ಸಂಗೀತ ವಾದ್ಯಗಳನ್ನು ತಂತಿ ವಾದ್ಯಗಳು ಹಾಗೂ ಅವನದ್ಧ ವಾದ್ಯಗಳನ್ನು ಸಂಗ್ರಹಿಸಿದ್ದರು. ಮ್ಯಾಂಡೊಲಿನ್, ಪಿಟೀಲು, ನಾದಸ್ವರ, ತಬಲ ಮತ್ತು ಮೃದಂಗಗಳು ಅವರ ಆಕರ್ಷಣೆಗಳಿಗೊಳಗಾಗಿದ್ದವು. ಮೃದಂಗದ ಕಂಪನಗಳು, ಪಿಟೀಲು ಧ್ವನಿ ತರಂಗಗಳ ಬಗೆಗೆ ಸಂಶೋಧನೆ ನಡೆಸಿದ್ದರು.

* * * *

ಸಂಗೀತ ಮತ್ತು ಅಧ್ಯಯನ ಅವರ ಪ್ರಿಯ ಹವ್ಯಾಸ. ಆರ್. ಎಲ್. ಸ್ಟೀವನ್‌ಸನ್‌ರ ಕೃತಿಗಳೆಂದರೆ ಪ್ರಾಣ. ಬಣ್ಣದ ಬಟ್ಟೆಗಳ ಬಗೆಗೆ ವಿಶೇಷ ವ್ಯಾಮೋಹ.

* * * *

ಅವರ ಶಿಷ್ಯರಲ್ಲಿ ಖ್ಯಾತ ವಿಜ್ಞಾನಿಗಳಾದವರುಂಟು. ಅವರಲ್ಲಿ ಮುಖ್ಯರು ಡಾ|| ಆರ್. ಎಸ್. ಕೃಷ್ಣನ್, ಡಾ|| ಎಸ್. ಭಗವಂತಂ ಮತ್ತು ಡಾ|| ವಿಕ್ರಮ ಸರಾಭಾಯ್.

* * * *

ಹೂವನ್ನು ಗಿಡದಿಂದ ಕಿತ್ತರೆ ಡಾ|| ರಾಮನ್ ಪ್ರತಿಭಟಿಸುತ್ತಿದ್ದರು. ಒಮ್ಮೆ ಅವರು ಚಿಕಿತ್ಸೆ ಪಡೆಯುತ್ತಿದ್ದ ಆಸ್ಪತ್ರೆಯಲ್ಲಿ ನವೆಂಬರ್ ೭ ಅವರ ಜನ್ಮದಿನ. ಅವರಿದ್ದ ಕೊಠಡಿಯನ್ನು ಪುಷ್ಪಗಳಿಂದ ಅಲಂಕರಿಸಲು ವೈದ್ಯರು ಪ್ರಯತ್ನಿಸಿದರಂತೆ. ಇದನ್ನು ತಿಳಿದ ರಾಮನ್ "ಹೂವು ಎಲ್ಲಿದ್ದವೋ ಅಲ್ಲಿಯೇ ಬಿಡಿ. ಹೂವು ಕೀಳದೆಯೇ ಅದರ ಸೌಂದರ್ಯ ಸವಿಯುವುದನ್ನು ಕಲಿಯಿರಿ" ಎಂದರು.